ಬುದ್ಧಿಯನ್ನು ಹೀನ ಜನರು ಮಾಡುತ್ತಾರೆ. ಸಮಸ್ತ ಮಾನವ ಕುಲವೇ ತನ್ನದೆಂದು ಉದಾರ ಹೃದಯವುಳ್ಳವರು ತಿಳಿಯುತ್ತಾರೆ." ಭೇದಭಾವ, ಪಕ್ಷಪಾತ ಬುದ್ಧಿಯನ್ನು ಮರೆತು, ಈ ಜಗತ್ತೆಲ್ಲಾ ತನ್ನವೆಂದು ತಿಳಿಯದಿದ್ದರೆ ನಿಜವಾದ ಶಾಂತಿಯ ಲಾಭ ಕನಸೇ ಸರಿ. ಆದ್ದರಿಂದಲೇ ಶಾಂತಿರೂಪಿಣಿಯಾದ ಶ್ರೀಮಾತೆಯವರ ಶಾಂತಿಯ ಉಪಾಯ ಹೀಗಿದೆ: "ಈ ಜಗತ್ತು ನಿನ್ನದೆಂದು ತಿಳಿ, ಮಗು. ಇಲ್ಲಿ ಯಾರೂ ಪರಕೀಯರಲ್ಲ, ಯಾರೂ ಹೊರಗಿನವರಲ್ಲ. ಎಲ್ಲರೂ ನಿನ್ನವರೇ." ಈ ಪ್ರಪಂಚದಲ್ಲಿ ಯಾರೂ ಆಗಂತುಕರಲ್ಲ, 'ಎಲ್ಲರೂ ನನ್ನವರೇ', ಎಲ್ಲರೂ ಭಗವಂತನ ಮಕ್ಕಳೇ – ಎಂದು ಸದಾ ನಾವು ಭಾವಿಸುತ್ತಿದ್ದರೆ, 'ವಸುಧೈವ ಕುಟುಂಬಕಮ್' (ಇಡೀ ಪ್ರಪಂಚವೇ ಒಂದು ಕುಟುಂಬ) ಎಂಬ ಅರಿವು ನಮ್ಮಲ್ಲಿ ಉಂಟಾಗುತ್ತದೆ. ಈ 'ವಸುಧೈವ ಕುಟುಂಬಕಮ್' ಜ್ಞಾನದಿಂದಲೇ ಮನುಷ್ಯ ಎಲ್ಲ ಜೀವಿಗಳಲ್ಲೂ ಪ್ರೇಮಮಯನಾದ ಭಗವಂತನನ್ನು ನೋಡುತ್ತಾನೆ. ಸತತ, ನಿರಂತರ ಅಭ್ಯಾಸದ ಪರಿಣಾಮವಾಗಿ ಮನುಷ್ಯ ಯಾವಾಗ ಆ ಉಚ್ಚ ಅವಸ್ಥೆಯನ್ನು ಹೊಂದುತ್ತಾನೆಯೋ, ಆಗಲೇ ಆತ ಪ್ರತಿಯೊಂದು ಜೀವಿಯೂ ಈಶ್ವರನ ಅಭಿವ್ಯಕ್ತಿಯೆಂದು, ಎಲ್ಲರೂ ಆ ಭಗವಂತನ ಮಕ್ಕಳೇ, ಆದ್ದರಿಂದ ಎಲ್ಲರೂ ತನ್ನ ಪರಮ ಆತ್ಮೀಯರು ಎಂದು ತಿಳಿದು ಎಲ್ಲರನ್ನೂ ಹೃತ್ಪೂರ್ವಕವಾಗಿ ಪ್ರೀತಿಸುತ್ತಾನೆ.

ಮಾತಾ ಮೇ ಪಾರ್ವತೀದೇವಿ ಪಿತಾ ದೇವೋ ಮಹೇಶ್ವರಃ ।
ಬಾಂಧವಾಃ ಶಿವಭಕ್ತಾಶ್ಚ ಸ್ವದೇಶೋ ಭುವನತ್ರಯಮ್ ॥

"ದೇವಿ ಪಾರ್ವತಿ ನನ್ನ ತಾಯಿ, ದೇವ ಮಹೇಶ್ವರ ನನ್ನ ತಂದೆ, ಶಿವಭಕ್ತರೆಲ್ಲಾ ನನ್ನ ಆತ್ಮೀಯರು ಹಾಗೂ ಮೂರು ಲೋಕಗಳೂ ನನ್ನ ಸ್ವಂತ ದೇಶ."

ಮೇಲಿನ ಸತ್ಯದ ಅರಿವು ಉಂಟಾದಾಗ ಮಾತ್ರವೇ, ಒಬ್ಬ ವ್ಯಕ್ತಿಗೆ ಸಂಪೂರ್ಣ ಶಾಂತಿಯ ಅನುಭವ ಉಂಟಾಗುತ್ತದೆ. ಇತರರ ದೋಷದ ಕಡೆ ಗಮನ ಕೊಡದೆ, ಎಲ್ಲರನ್ನೂ ಹೃತ್ಪೂರ್ವಕವಾಗಿ ಪ್ರೀತಿಸುವ ಆದರ್ಶದ ಕಡೆ ಮುನ್ನಡೆದರೆ ವ್ಯಕ್ತಿಜೀವನದಲ್ಲಿ ಶಾಂತಿ ತುಂಬಿ ತುಳುಕಾಡುತ್ತದೆ. ಅದೇ ರೀತಿ ಸಮಾಜ ಹಾಗೂ ವಿಶ್ವ ಶಾಂತಿಮಯವಾಗುತ್ತವೆ.

ಶ್ರೀಮಾತೆಯವರಲ್ಲಿ ಕೈಮುಗಿದು, ದೀನತೆಯಿಂದ ಪ್ರಾರ್ಥಿಸೋಣ:

"ಹೇ ಶಾಂತಿ ಸ್ವರೂಪಿಣಿ ಮಾತೆ! ನೀನು ತೋರಿಸಿರುವ ಶಾಂತಿಯ ಪಥದಲ್ಲಿ ಮುನ್ನಡೆಯಲು ನಮಗೆ ಶಕ್ತಿಯನ್ನು ದಯಪಾಲಿಸು. ಇತರರ ದೋಷವನ್ನು ನೋಡದೆ ಆತ್ಮವಿಶ್ಲೇಷಣೆ ಮತ್ತು ಆತ್ಮವಿಮರ್ಶೆಗಳ ಮೂಲಕ ನಮ್ಮನ್ನು ನಾವು ಪರೀಕ್ಷಿಸಿಕೊಳ್ಳುತ್ತ, ನಮ್ಮೆಲ್ಲ ತಪ್ಪುಗಳನ್ನು, ದುರ್ಬಲತೆಗಳನ್ನು ಹೊರದೂಡುವ ಶಕ್ತಿ, ಉತ್ಸಾಹ ದಯಪಾಲಿಸು. ಹೇ ಮಾತೆ! ಈ ಜಗತ್ತಿನ ಎಲ್ಲರನ್ನೂ ಹೃತ್ಪೂರ್ವಕವಾಗಿ ಪ್ರೀತಿಸುವ, ಎಲ್ಲರಿಗೂ ಒಳಿತನ್ನು ಬಯಸುವ ಉದಾರ ಮನೋಭಾವ ನೀಡು. ನನ್ನ ಹೃದಯಮಂದಿರದಲ್ಲಿ 'ಶಾಂತಿಯ ಕುಂಭ' ಶಾಶ್ವತವಾಗಿ ನೆಲೆಸುವಂತಾಗಲಿ ಹಾಗೂ ನನ್ನ ಜೀವನ ಪೂರ್ಣತೆ, ಧನ್ಯತೆಗಳನ್ನು ಹೊಂದಿ ಸಾರ್ಥಕವಾಗಲಿ ಎಂದು ಆಶೀರ್ವಾದ ಮಾಡು."

✪

## ಚಿಂತನ ಪ್ರಭ

### ದೈವಸಂಕಲ್ಪ

ಮೈಸೂರಿನಿಂದ ರೈಲು ಬೆಂಗಳೂರು ಸ್ಟೇಷನ್ ಸೇರಿದ ಮೇಲೆ ಹುಬ್ಬಳ್ಳಿಗೆ ಹೋಗುವುದೇ? ಗುಂತಕಲ್ಲಿಗೆ ಹೋಗುವುದೇ? ಯಾವುದು ಯಾವ ಕಡೆ ಹೋಗಬೇಕು, ಅದರ ನಿಯಾಮಕರು ಬಲ್ಲರು. ಅದು ಎತ್ತ ಹೋಗಬೇಕೋ ಅತ್ತ ಹೋಗುವಂತೆ, ಪಾಳಿಯ ಕೆಲಸಗಾರ ಕಂಬಿಯನ್ನು ತಿರುಗಿಸುತ್ತಾನೆ. ರೈಲಿಗೆ ತಾನು ಎತ್ತ ಹೋಗಬೇಕು ಎಂದು ತಿಳಿಯದು.

ತನ್ನ ಗುರಿ ಯಾವುದು ಅದನ್ನು ಮನುಷ್ಯ ಕಾಣ. ಅವನ ದೈವ ಬಲ್ಲದು. ಏನೇ ಸಂಗತಿ ನಡೆಯುವ ಮೊದಲು ನಾವು ದೈವ ಮಾಡಿದ್ದಾಗಲಿ ಎಂದು ಕೆಲಸ ಮಾಡದೆ ಕುಳ್ಳಿರಬಾರದು. ಆದರೆ ಒಂದು ಸಂಗತಿ ನಡೆದ ಮೇಲೆ ಅದು ದೈವದ ಇಚ್ಛೆ ಎಂದು ಒಪ್ಪಿ ಮುಂದೆ ಏನು ಎಂದು ನಡೆಯುವುದೇ ಜಾಣತನ. ಇದರಿಂದ ಭಾಗ್ಯ ತಪ್ಪಿತು ಎಂಬ ವ್ಯಥೆ ತಪ್ಪುತ್ತದೆ. ಮುಂದೆ ಮಾಡಲು ಕೆಲಸ ಕಾಣುತ್ತದೆ. ಅದನ್ನು ಮಾಡಲು ಬೇಕಾದ ಸಮಾಧಾನ ಒದಗುತ್ತದೆ. ಅದನ್ನು ಮಾಡುವುದರಲ್ಲಿ ಸಂತೋಷವೇ ಲಭಿಸುತ್ತದೆ. ಏನೋ ನಷ್ಟವಾಯಿತು ಎಂದು ದುಃಖದಲ್ಲಿ ಕುಗ್ಗದೆ ಮನುಷ್ಯ ದಿನವನ್ನು ಶುಭದ ಸಾಧನೆಯಲ್ಲಿ ಕಳೆಯುತ್ತಾನೆ, ಜನ್ಮವನ್ನು ಸಾರ್ಥಕ ಮಾಡಿಕೊಳ್ಳುತ್ತಾನೆ, ದೇವರ ಸೇವಕನೇ ಆಗಿರುತ್ತಾನೆ.

ದಡದಲ್ಲಿ ಬಿದ್ದಿರುವ ಮರದ ಕೊರಡನ್ನು ಸಮುದ್ರದ ನೀರು ಒಮ್ಮೆ ಮುಟ್ಟಿ ಒಳಗೆ ಎಳೆದುಕೊಳ್ಳುತ್ತದೆ. ಇಷ್ಟ ಬಂದಷ್ಟು ಹೊತ್ತು ತೇಲಿಸಿ ಆಡಿಸುತ್ತದೆ. ಇದಕ್ಕೆ ಸಾಕೆಂದು ತೋರಿದಾಗ ಮತ್ತೆ ತರುತ್ತದೆ. ಮರಳ ಮೇಲಕ್ಕೆ ಎಸೆಯುತ್ತದೆ.

ಬಾಳಿನಲ್ಲಿ ಮನುಷ್ಯ ತನ್ನ ಯತ್ನದಲ್ಲಿರುವುದನ್ನು ತಾನು ಮಾಡಬೇಕು. ತನ್ನ ಯತ್ನಕ್ಕೆ ಮಿಂಚಿದ್ದನ್ನು ದೈವಸಂಕಲ್ಪಕ್ಕೆ ಬಿಟ್ಟು ಅದು ನೀರಿಗೆ ಸೆಳೆದಾಗ ನೀರಿನಲ್ಲಿ ತೇಲಿ, ಗಡ್ಡೆಗೆ ಎಸೆದಾಗ ಅಲ್ಲಿ ಸಮಾಧಾನವಾಗಿ ಬಾಳಬೇಕು. ದೈವ ಎನ್ನುವುದು ಮನಸ್ಸಿಗೆ ನಿಜವಾಗಿ ಕಂಡರೆ, ಮನುಷ್ಯ ಸಮಾಧಾನದಿಂದ ಮಾತ್ರ ಅಲ್ಲ, ಸಂತೋಷವಾಗಿಯೇ ಬಾಳುವನು.

– ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಆಧಾರ: ಭಾವ)